**ಬಿಜೆಪಿ ಚಿಂತಿಸುವುದು ಅಗತ್ಯ**

ಮಾಜಿ ಹಣಕಾಸು ಮಂತ್ರಿ ಹಾಗೂ ಕಟ್ಟಾ ಜನತಾದಳವಾದಿ ಶ್ರೀ ಯಶವಂತ ಸಿನ್ಹಾರ ಸೇರ್ಪಡೆಯು ಭಾರತೀಯ ಜನತಾ ಪಕ್ಷದ ಘನತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಆದರೆ ಬಿ.ಜೆ.ಪಿ.ಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಅದ್ವಾನಿಯವರು, ಯಶವಂತ ಸಿನ್ಹಾರವರ ಸೇರ್ಪಡೆಯನ್ನು ದೀಪಾವಳಿಯ ಉಡುಗೊರೆ ಎಂದು ಬಣ್ಣಿಸಿರುವುದು ಸಮಂಜಸವಲ್ಲ. ಯಶವಂತ ಸಿನ್ಹಾ, ಒಬ್ಬ ಹೆಸರಾಂತ ರಾಷ್ಟ್ರೀಯ ನಾಯಕರಿರಬಹುದು, ಆದರೆ ಮೊನ್ನೆಮೊನ್ನೆಯವರೆಗೂ ಅವರು ಬಿ.ಜೆ.ಪಿ.ಯ ಕಟು ಟೀಕಾಕಾರರಲ್ಲಿ ಒಬ್ಬರಾಗಿದ್ದರು ಎಂಬುದನ್ನು ಬಿ.ಜೆ.ಪಿ ಮರೆಯಬಾರದು. ತನ್ನ ಪಕ್ಷ ರಾಷ್ಟ್ರಮಟ್ಟದಲ್ಲಿ ಅಸ್ತಿತ್ವವನ್ನು ಕಳೆದುಕೊಡು, ಸರಿಯಾದ ತತ್ವ ಅಥವಾ ನಾಯಕರು ಇಲ್ಲದೆ ಪಕ್ಷದಿಂದ ಹೊರಬಂದ ಸಿನ್ಹ, ತನ್ನ ಸ್ವಂತ ಲಾಭಕ್ಕಾಗಿಯಷ್ಟೇ ಭಾರತೀಯ ಜನತಾ ಪಕ್ಷಕ್ಕೆ ಸೇರಿದ್ದಾರೆ. ಅವರಿಗೆ ಜನ ಬೆಂಬಲವಾಗಲಿ, ಸಾರ್ವಜನಿಕ ವರ್ಚಸ್ಸಾಗಲಿ ಈಗ ಉಳಿದಿಲ್ಲ.

ಆದರೆ ಬಿ.ಜೆ.ಪಿ. ಯು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನೆರಳಿನಲ್ಲಿ ಬೆಳೆದು ಬಂದ ಶಿಸ್ತಿನ ಪಕ್ಷ. ಈ ಪಕ್ಷದಲ್ಲಿನ ಬಹುಪಾಲು ನಾಯಕರು ಆರೆಸ್ಸೆಸ್ಸಿನ ಶಿಸ್ತು, ಅನುಶಾಸನಗಳ ಬದ್ಧತೆಗೆ ಒಳಗಾದವರು. ಈ ಕಾರಣದಿಂದ ಬಿ.ಜೆ.ಪಿಯು ಇಂದು ಪ್ರಬಲ ಪಕ್ಷವಾಗಿ ಬೆಳೆದು ನಿಂತಿದೆ. ಆದರೆ ಪಕ್ಷವು ಬೆಳೆದಂತೆಲ್ಲಾ, ಅದರ ಜನಪ್ರಿಯತೆ ವ್ಯಾಪಕವಾದಂತೆಲ್ಲಾ, ಎಲ್ಲಾ ವರ್ಗದ ಜನರೂ, ಎಲ್ಲ ಕ್ಷೇತ್ರದ ಪ್ರಮುಖರೂ ಅದರ ಹತ್ತಿರಕ್ಕೆ ಆಕರ್ಷಿತರಾಗುವುದು ಸಹಜ. ಈ ರೀತಿ ಆಕರ್ಷಿತರಾದವರಲ್ಲಿ ಯಶವಂತ ಸಿನ್ಹಾರಂತವರು ಹಲವರಿದ್ದಾರೆ. ಆದರೆ ಇಂತಹ ವ್ಯಕ್ತಿಗಳಿಗೆ ಪಕ್ಷದಲ್ಲಿ ಸ್ಥಾನಮಾನಕೊಡುವುದು ಪಕ್ಷದ ಹೆಸರಿಗೆ ಕಳಂಕ ಮಾತ್ರವಲ್ಲದೆ, ಪಕ್ಷದ ಕಾರ್ಯಕರ್ತರನ್ನು ಅಲಕ್ಷಿಸಿದಂತಾಗುತ್ತದೆ. ಬೇರೆಲ್ಲಾ ಪಕ್ಷಗಳಂತೆ ಬಿ.ಜೆ.ಪಿ. ಯ ಸೀಟಿಗಾಗಿ ಕಿತ್ತಾಟವಿದೆ ಎಂಬುದು ದೆಹಲಿ ಚುನಾವಣಾ ಟಿಕೇಟು ಹಂಚಿಕೆ ವಿಷಯದಲ್ಲಿ ಸಾಬೀತಾಗಿದೆ. ಹೀಗಾಗಿರುವುದಕ್ಕೆ, ಸಿನ್ಹಾರಂತಹ ಹಲವು ವ್ಯಕ್ತಿಗಳಿಗೆ ನೀಡಿರುವ ಸ್ಥಾನಮಾನಗಳೇ ಕಾರಣವಾಗಿದೆ ಎಂದರೆ ತಪ್ಪಾಗಾರದು. ಭವ್ಯ ಭಾರತ ನಿರ್ಮಾಣದ ಸಂಘದ ಕನಸನ್ನು ನನಸು ಮಾಡುವಲ್ಲಿ ಬಿ.ಜೆ.ಪಿ. ಯು ಮುನ್ನುಗ್ಗುತ್ತಿರುವುದೇನೋ ನಿಜ. ಆದರೆ ಇಂತಹ ಕೆಲವಾರು ವಿಷಯಗಳ ಬಗ್ಗೆ ಪಕ್ಷದ ಮೇಲ್ಪಂಕ್ತಿಯ ನಾಯಕರು ಚಿಂತಿಸುವುದು ಹಾಗೂ ಆಲೋಚಿಸುವುದು ಅಗತ್ಯ.

Nov 28th 1993 Hosa Diganta BJP Chintisuvudu Agatya